ಉಸಾಬರಿಯನ್ನೆಲ್ಲಾ ತಲೆ ಮ್ಯಾಲೆ ಹೊತ್ಕಂಡವ್ನಂಗೆ ಆಡುತ್ತಿದ್ದದ್ದು ಅಡವಪ್ಪನಿಗೆ ಬಿಲ್ಕುಲ್ ಇಷ್ಟವಿರಲಿಲ್ಲ. ಆ ಕಾರಣಕ್ಕೇ ಚಿಕ್ಕೋರನ ಸಾವಿನ ವಿಚಾರದಲ್ಲಿ ಮಗ ಹುಡುಸ್ಲೇಗೌಡನನ್ನು ಇಕ್ಕಟ್ಟಿಗೆ ಸಿಕ್ಕಿಸಿದಾಗ, 'ಈ ನನ್ ಮಗುಂಗೆ ನಮ್ಮೋರು ತಮ್ಮೋರು ಜಾತಿ ಕುಲ ಅನ್ನೋದೊಂದೂ ಇಲ್ಲ, ಅದಾವ ಇಸ್ಗಳ್ಗೇಲಿ ಇವ್ರುನ್ನ ನಾನು ಓದಾಕೆ ಕಳ್ಸುದ್ನೋ ಅಲ್ಲಿಂದ ಸುರ್ವಾತು ಈ ರೋಗ, ಓದಿ ಕಡ್ದು ಕಟ್ಟೆ ಹಾಕಾದು ಸಾಕು ಅಂತ ಮೇಣಿ ಹಾಲ್ಕುಡ್ಸಿದ್ರೆ ನಾಯ್ನಂಗೆ ಹೇಳಿದ್ ಕೇಳ್ಕಂಡ್ ಬಿದ್ದಿರೋನು,' ಅಂದುಕೊಂಡು ಹುಡುಸ್ಲೇಗೌಡನ ಪರವಹಿಸಿದ್ದ. ಇನ್ನ್ಯಾವತ್ತೂ ಇಂಥಾವ್ಕೆ ತಲೆ ಹಾಕ್ದಂಗೆ ಚೆನ್ನಾಗಿ ಇರುಕ್ಸುವಂತೆಯೂ ಹೇಳಿದ್ದ. 'ಹೇಲ್ತಿನ್ನೋ ದೇವ್ರಿಗೆ ಹೆಂಡ ಕುಡ್ಯೋ ಪೂಜಾರಿ ಅನ್ನೋವಂಗೆ ಇವ್ರುನ್ ಜೊತ್ಗೆ ಆ ಅಡ್ನಾಡಿ ಓಚಯ್ಯ ಬ್ಯಾರೆ ಗಂಟಾಕ್ಕೆಂಡವ್ನೆ,' ಅಂತ ಸುಮಾರು ಸಲ ಸುಂದ್ರೇಶ ಮೇಷ್ಟ್ರನ್ನೂ ಹಿಗ್ಗಾಮುಗ್ಗಾ ಬೈಕೊಂಡಿದ್ದ. ಹಂಗಂತ ಖುದ್ದು ಸುಂದ್ರೇಶ ಮೇಷ್ಟ್ರಿಗೂ ಹೇಳಿನೋಡಿದ್ದ. ಅವನು ತನ್ನ ಮಾತುಗಳಿಗೆ ಕಿಮ್ಮತ್ತು ಕೊಡಲ್ಲ ಅಂತ ಗೊತ್ತಾಗಿ ತೆಪ್ಪಗಾಗಿದ್ದ. ಈ ಸಾರ್ತಿನೂ ಹಂಗೇ ಸುಂದ್ರೇಶ ಮೇಷ್ಟ್ರ ಜೊತೇಲೋ ಇಲ್ಲಾ ಆ ಅಡ್ಬಿಟ್ಟಿ ಗೆಣೆಕಾರರ ಜೊತೇಲೋ ಎಲ್ಲೋ ಅಲ್ಕಂಡೋಗಿದಾನೆ ಅಂತ ಅಂದುಕೊಂಡಿದ್ದ.

ಮಾಗಿ ಕಾಲದ ಚಳಿಯ ಆಯಸ್ಸು ಮುಗಿಯುತ್ತಾ ಬಂದಿತ್ತು. ಆದರೂ ಬೆಳಗ್ಗೆ ಗಂಟೆ ಎಂಟಾದರೂ ಕಣ್ಣು ಯ್ದರೆ ಕಣ್ಣಾಕಣದಂಗೆ ಕಾವಳ ಕವುಕಂಡು, ಜಿಡಿ ಮಳೆಯ ಹನಿಗಳಂತೆ ಮರಗಿಡಗಳ ಎಲೆಗಳ ಎದೆಯಿಂದ ತೊಟ್ಟಿಕ್ಕುತ್ತಿತ್ತು. ತೋಟದಾಚೆಯ ಹಾದಿಯಲ್ಲಿದ್ದ ಬೀದಿ ದೀಪ ಬೆಳಕಿನ ಗೆರೆಯಂತೆ ಗೋಚರಿಸುತ್ತಿತ್ತು. ಅಡವಪ್ಪನೆಡೆಯಿಂದ ಮಾತುಗಳೇಳದಿದ್ದರೂ ಅವನ ನೋಟವೇ ಸಕಲವನ್ನೂ ತೋರಾಕುತ್ತಿದೆ ಅನ್ನುವಂತೆ ಹೊನ್ನಟ್ಟಾಲಯ್ಯ ಮನೆಯ ಅಂಗಳದಲ್ಲಿದ್ದ ನೇರಳೆಯ ಮರದಡಿಯ ಕಲ್ಲು ಬೆಂಚಿನಲ್ಲಿ ಹೋಗಿ ಕೂತ. ಕಟ್ಟಿನಿಂದ ಬೀಡಿಯೊಂದನ್ನು ಇರುಕಂಡು ತುಟಿಯ ನಡುವಲ್ಲಿ ನೆಟುಗಂಡು ಬಲಗೈನ ತೋರು ಬೆರಳಿಂದ ಬೆಂಕಿಪಟ್ಟಣದ ಬಾಯಿಯನ್ನು ತಳ್ಳಿ ಬಿಚ್ಚಿ ಅದರೊಳಗಿಂದ ಕಡ್ಡಿಯೊಂದನ್ನು ಎತ್ತಿಕೊಂಡು, 'ಚಳ್ಗೆ ಇದ್ ಬ್ಯಾರೆ ಹತ್ಕೆಣುತ್ತೋ ಇಲ್ವೋ' ಅಂದುಕೊಳ್ಳುತ್ತಾ ಗೀರತೊಡಗಿದ. ಒಂದರ ಮಕ್ಕೆ ಒಂದರಂತೆ ಗೀರೇ ಗೀರಿದ. ಬೆಂಕಿಪಟ್ಟದ ಕಡ್ಡಿಗಳೆಲ್ಲಾ ಕಲಾಸಾಗುತ್ತಾ ಬಂದರೂ ಬೆಂಕಿ ಒಂಚೂರೂ ಕೊಸರಾಡಲಿಲ್ಲ. ಕೊರಪರ ಅಂದುಕೊಂಡು ಖಾಲಿಯಾಗಿದ್ದ ಪಟ್ಟಣವನ್ನು ಬಿಸಾಡಲೆಂದು ಕೈ ಎತ್ತಿದವನು ಬಿಸಾಕಲು ಮನಸು ಬಾರದೆ ಮೆಲ್ಲಗೆ ಮತ್ತೆ ಜೇಬಿಗಿಳಿಸಿಕೊಂಡ.

ಅಡವಪ್ಪನಿಗೆ ಹೊನ್ನಟ್ಟಾಲಯ್ಯನ ಅಂಥ ನಡಾವಳಿಕೆ ಹೊಸದೇನಾಗಿರಲಿಲ್ಲ. ಆದರೆ, ಅವನೊಳಗಿನ ಅವತ್ತಿನ ಘಾಸಿ ಮಾತ್ರ ಖುದ್ದು ಅಡವಪ್ಪನಿಗೇ ಎದೆ ಇರಿಯುವಂತಿತ್ತು. ಆದರೂ ಒಂಚೂರೂ ಮಿಸುಕಾಡಲೊಪ್ಪದ ಮೌನವನ್ನು ಮುರಿಯಲಿಚ್ಛಿಸದೆ ಕವಳದ ಎದೆಯಾಚೆಯ ಅನಂತದಲ್ಲಿ ಲೀನವಾಗುತ್ತಿರುವವನಂತೆ ತನ್ನೆದುರಿನ ಕಣ್ಣಳತೆಗೆ ದಕ್ಕಿದ್ದನ್ನೆಲ್ಲಾ ನಿಟುಕಿಸಿಕೊಳ್ಳುತ್ತಿದ್ದ. ಹೀಗೆ ಉಸಿರು ಕಟ್ಟುತ್ತಿದ್ದ ಮೌನದೊಂದಿಗೆ ಅವರಿಬ್ಬರ ನಡುವೆ ಹೊತ್ತೆಂಬುದು ಸುಸ್ತಾಗಿ ಮಕಂಡಿತ್ತು. ಅಡವಪ್ಪನನ್ನು ಮತ್ತೆ ಕೆದಕಲು ಧೈರ್ಯಬಾರದ ಹೊನ್ನಟ್ಟಾಲಯ್ಯ ಮೆಲ್ಲನೆ ಮೇಲೆದ್ದು ಅರ್ಧಕ್ಕೆ ಮಡಿಚಿಕೊಂಡಿದ್ದ ಲುಂಗಿಯನ್ನು ಬಿಚ್ಚಿಕೊಂಡು ಮೈ ಪೂರಾ ಹೊದ್ದು ಗೂಬಲು ಹಾಕಿಕೊಂಡು ಮತ್ತಲ್ಲೇ ಕೂತ. ಪಿಸರುಗಣ್ಣಿನ ಸೂರ್ಯ ಕಾವಳದ ಮುಸುಕಿಗೆ ಮೆಲ್ಲಗೆ ಗುದ್ದುಕೊಡತೊಡಗಿದ್ದ. ಆಗ ಹತ್ತಿಯ ಹಾಳೆ ಗಾಳಿಯಲ್ಲಿ ತೇಲಿ ಮರೆಯಾಗುವಂತೆ ಕಾವಳ ಕರಗತೊಡಗಿ ಸುತ್ತಲಿನದನ್ನೆಲ್ಲಾ ಈಟೀಟೇ ಕಾಣಾಕತೊಡಗಿತು. ಹಂಗಾಗಿ ಅಡವಪ್ಪನ ತೋಟದ ನಡೂಮಧ್ಯೆ ಕೂತಿದ್ದ ಹೆಂಚಿನ ಮನೆಯೂ ಅದರ ಸುತ್ತಲೂ ಇದ್ದ ಕೊಣಬೇವಿನ ಬೇಲಿಯೂ ನಡಮುರಿದು ಬಿದ್ದಿದ್ದ ಬಿದಿರು ಮುಳ್ಳಿನ ಹೊಳೆಯಬಾಗಿಲೂ ಬೇಲಿಯೊಳಗೇ ಬೆಳಕಂಡಿದ್ದ ನುಗ್ಗೆಯ ಮರವೂ ಅದನ್ನು ಹಬ್ಬಿದ್ದ